ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಪ್ರೌಢಶಾಲೆಗಳಲ್ಲಿ 31-3-91 ರಲ್ಲಿ ಇರತಕ್ಕ 223 ಸಹ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಮುಂದೆ ಇರತಕ್ಕ ಅಕಡೆಮಿಕ್ ವರ್ಷದೊಳಗೆ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಇಡೀ ಕರ್ನಾಟಕ ರಾಜ್ಯದಲ್ಲಿ 400 ಜೂನಿಯರ್ ಕಾಲೇಜುಗಳ ಉಪನ್ಯಾಸಕರನ್ನು ನೇಮಕ ಮಾಡುವುದಕ್ಕೆ ಈಗಾಗಲೇ ಕ್ರಮವನ್ನು ತೆಗೆದುಕೊಂಡು ಪಟ್ಟಿ ಕೂಡ ತಯಾರಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಅಭ್ಯರ್ಥಿಗಳ ವೆರಿಫಿಕೇಷನ್‌ಗೂ ಕ್ರಮ ತೆಗೆದುಕೊಂಡಿದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಸುಮಾರು 400 ಪದವಿ ಪೂರ್ವ ಕಾಲೇಜುಗಳಿಗೆ ಉಪನ್ಯಾಸಕರನ್ನು ಬರುವ ಜೂನ್ ತಿಂಗಳೊಳಗೆ ತುಂಬತಕ್ಕ ಕೆಲಸವನ್ನು ನಾವು ಮಾಡುತ್ತೇವೆ.

ಇನ್ನು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರತಕ್ಕಂತಹ ಶಿಕ್ಷಕರ ಹುದ್ದೆಗಳನ್ನು ತುಂಬಲು ನಾವು ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗದವರಿಗೆ ಬರೆದಿದ್ದೇವೆ, ಅದು ಅವರು ಮಾಡತಕ್ಕ ಕೆಲಸ. ಅವರಿಂದ ಈ ಬಗ್ಗೆ ಆಯ್ಕೆಯ ವಿಚಾರದಲ್ಲಿ ಕಾರ್ಯಕ್ರಮಾವಾದ ಕೂಡಲೆ ನಾವು ಆ ಹುದ್ದೆಗಳನ್ನು ತುಂಬಲು ಹಣದ ವ್ಯವಸ್ಥೆಯಲ್ಲಿ ತೊಂದರೆ ಇದ್ದರೂ ಕೂಡ ಉಪಧ್ಯಾಯರ ಅಥವಾ ಉಪನ್ಯಾಸಕರ ಹುದ್ದೆಯನ್ನು ತುಂಬಲು ಈ ಹೆಚ್ಚು ತೊಂದರೆ ಇರಬಾರದು ಎಂದು ಈಗಾಗಲೇ ಹಣಕಾಸಿನ ಇಲಾಖೆಯವರಿಗೆ ಹೇಳಿದ್ದೇವೆ. ಇನ್ನು ಮುಖ್ಯೋಪಾಧ್ಯಾಯರ ವಿಚಾರದಲ್ಲಿಯೂ ಅಷ್ಟೇ, ತಮಗೆ ಗೊತ್ತಿರುವಂತೆ, ಇದರಲ್ಲಿ ಶೇಕಡಾ 50ರಷ್ಟು ಹುದ್ದೆಗಳಿಗೆ ನೇರವಾಗಿ ನೇಮಕಾತಿ ಮಾಡಬೇಕು, ಉಳಿದ 50ರಷ್ಟನ್ನು ಪ್ರಮೋಶನ್ ಮೂಲಕ ಮಾಡಬೇಕು. ನಾವು ಈ 50ರಷ್ಟು ಹುದ್ದೆಗಳಿಗೆ ಪ್ರಮೋಷನ್ ಮೂಲಕ ತುಂಬಲು ಈಗಾಗಲೆ ಗ್ರೆಡೇಶನ್ ಪಟ್ಟಿಯನ್ನು ತಯಾರು ಮಾಡುತ್ತಿದ್ದೇವೆ. ನೇರ ನೇಮಕಾತಿಯನ್ನು ಕರ್ನಾಟಕ ಲೋಕಸೇವಾ ಆಯೋಗದವರು ಮಾಡಬೇಕು, ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಭರ್ತಿಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜೆ.ಎಸ್. ಆಚಾರ್: ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಪ್ರೌಢಶಾಲೆಗಳಲ್ಲಿ ಮಂಜೂರಾಗಿರುವ ಹುದ್ದೆಗಳು ಬಹಳಷ್ಟು ಖಾಲಿ ಇದ್ದು, ಮುಖ್ಯೋಪಾಧ್ಯಾಯರೂ ಇಲ್ಲದೆ, ಖಾಯಂ ಶಿಕ್ಷಕರೂ ಇಲ್ಲದೆ, ತಾತ್ಕಾಲಿಕವಾದ ವ್ಯವಸ್ಥೆಯನ್ನು ಮಾಡಿಕೊಂಡು ಹೋಗುತ್ತಿರುವುದು ಇದೆ. ಅಂಥಾದ್ದರಲ್ಲಿ ಆದಷ್ಟು ಬೇಗ ಇದನ್ನು ಪರಿಗಣನೆಗೆ ತೆಗೆದುಕೊಂಡು ನೇಮಕ ಮಾಡಬೇಕು. ಎರಡನೆಯದಾಗಿ ಮಿತ ವೇತನ ಪದವೀಧರರನ್ನು ಖಾಯಂಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆ. ಇದರಲ್ಲಿ ಎಷ್ಟೋ ಜನರು ಬಿ.ಎಡ್ ಪದವೀಧರರಿದ್ದಾರೆ. ಅಂತಹವರನ್ನು ಇವತ್ತು ಬೇರೆ ಪೋಸ್ಟ್‌ಗೆ ಹಾಕುತ್ತಿದ್ದಾರೆ. ಪ್ರೌಢ ಶಾಲೆಗಳ ಶಿಕ್ಷಕರನ್ನಾಗಿ ನೇಮಕ ಮಾಡುವ ಬದಲು ಸರ್ಕಾರದ ಇನ್ನಿತರ ಇಲಾಖೆಗಳಿಗೆ ಹಾಕುತ್ತಿದ್ದಾರೆ, ಅಂತಹವರನ್ನು ತೆಗೆದುಕೊಳ್ಳಬಹುದು. ಏಕೆಂದರೆ ಅವರು ಹಿಂದೆ ಸ್ಪೈಫಂಡರಿ ಬೇಸಿನ್‌ನಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದವರು. ಅವರನ್ನು ಖಾಯಂ ಗೊಳಿಸುವುದು ಎಂದು ಸರ್ಕಾರದ ತೀರ್ಮಾನ ಮಾಡಿದೆ. ಹಾಗೆ ಮಾಡುವಾಗ ಶಿಕ್ಷಣ ಇಲಾಖೆಯಲ್ಲಿಯೇ ಅವರನ್ನು ಭರ್ತಿಮಾಡುವುದು ಒಳ್ಳೆಯದಲ್ಲವೇ ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಸೂಚನೆಯ ಬಗ್ಗೆ ಸರ್ಕಾರ ಅಲೋಚನೆ ಮಾಡುತ್ತದೆ.

ಗ್ರಾಮಾಂತರ ಶಾಲೆಗಳಲ್ಲಿ ಶಿಕ್ಷಕರ ಕೊರತೆ

1225 - ಪ್ರೊ. ಎಂ.ಡಿ. ನಂಜುಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಶಾಲೆಗಳಲ್ಲಿ ಎಷ್ಟು ವರ್ಗಗಳಿವೆಯೋ ಅದಕ್ಕೆ ತಕ್ಕ ಸಂಖ್ಯೆಯಲ್ಲಿ ಶಿಕ್ಷಕರಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಎಷ್ಟು ವರ್ಗಗಳಿವೆಯೋ ಕನಿಷ್ಟ ಅಷ್ಟೇ ಸಂಖ್ಯೆಯ ಶಿಕ್ಷಕರನ್ನು ಮುಂದಿನ ಶಿಕ್ಷಣ ವರ್ಷದಲ್ಲಾದರೂ ನೇಮಿಸುವ ವಿಶ್ವಾಸ ಸರ್ಕಾರಕ್ಕಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಹೌದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನನ್ನ ಪ್ರಶ್ನೆ ಏನೆಂದರೆ, ಗ್ರಾಮಾಂತರ ಶಾಲೆಗಳಲ್ಲಿ ಎಷ್ಟು ವರ್ಗಗಳಿವೆಯೋ ಕನಿಷ್ಟ ಅಷ್ಟೇ ಸಂಖ್ಯೆಯ ಶಿಕ್ಷಕರನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಾದರೂ ನೇಮಿಸುವ ವಿಶ್ವಾಸ ಸರ್ಕಾರಕ್ಕೆ ಇದೆಯೇ ಎಂದು ಕೇಳಿದರೆ, ಮಾನ್ಯ ಶಿಕ್ಷಣ ಮಂತ್ರಿಗಳು ಇದೆ ಎಂದು ಹೇಳಿದ್ದಾರೆ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ನಮ್ಮ ಗ್ರಾಮಾಂತರ ಶಾಲೆಗಳನ್ನು ಎಷ್ಟು ವರ್ಗಗಳಿವೆಯೋ ಅದಕ್ಕೆ ಸಮನಾಗಿ ಶಿಕ್ಷಕರನ್ನು ನೇಮಕ ಮಾಡುವಂತಹ ಭರವಸೆಯನ್ನು ಕೊಡುತ್ತಾರೆಯೇ? ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ ನಾನು ಉತ್ತರದಲ್ಲಿ ಕೇಳಿದ್ದೇನೆ. ಎಷ್ಟು ವರ್ಗಗಳಿವೆಯೋ ಕನಿಷ್ಟ ಅಷ್ಟೇ ಸಂಖ್ಯೆಯ ಶಿಕ್ಷಕರನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಾದರೂ ನೇಮಿಸುವ ವಿಶ್ವಾಸ ಸರ್ಕಾರಕ್ಕಿದೆಯೇ ಎಂದು ಕೇಳಿದ್ದಾರೆ. ಅದಕ್ಕೆ ಹೌದು ಎಂದು ಉತ್ತರ ಹೇಳಿದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ವಿಶ್ವಾಸ ಬೇರೆ, ಭರವಸೆ ಬೇರೆ, ನಾನು ಏಕೆ ಹೇಳುತ್ತೇನೆಂದರೆ ತಮ್ಮ ಗಣಿತದಲ್ಲಿ ಏನಾದರೂ ತಪ್ಪಾಗಿರಬಹುದು. ಈವತ್ತಿನ ಪರಿಸ್ಥಿತಿಯಲ್ಲಿ ನಮ್ಮ ಹಳ್ಳಿಗಳಲ್ಲಿ ಏನಾಗಿದೆಯೆಂದರೆ, 7 ವರ್ಗಗಳು (ತರಗತಿಗಳು) ಇದ್ದರೆ 4 ಕೋಣೆಗಳಿವೆ, ನಾಲ್ಕು ಕೋಣೆಗಳಿದ್ದರೆ ಇಬ್ಬರು ಶಿಕ್ಷಕರಿದ್ದಾರೆ, ಇದು ಈವತ್ತಿನ ಪರಿಸ್ಥಿತಿ. ಆ ಕಾರಣಕ್ಕಾಗಿ ನಾನು ಕೇಳುವುದೆನೆಂದರೆ, ಮುಂದಿನ ಶೈಕ್ಷಣಿಕ ವರ್ಷದಲ್ಲಾದರೂ ಎಷ್ಟು ವರ್ಗಗಳಿವೆಯೋ ಅದಕ್ಕೆ ಸಮನಾಗಿ ಶಿಕ್ಷಕರನ್ನು ಕೊಡುತ್ತೀರಾ? ಅವರ ಗಣಿತದಲ್ಲಿ ದೋಷವಿದೆ ಎಂದು ಏಕೆ ಹೇಳುತ್ತೇನೆಂದರೆ, ನನ್ನ ಗಣಿತದ ಪ್ರಕಾರ ಮತ್ತು ನಿಮ್ಮ ಇಲಾಖೆಯ ಅಧಿಕಾರಿಗಳು ಕೊಟ್ಟಿರುವ ಗಣಿತದ ಪ್ರಕಾರ ಈ ವರ್ಷ ನೀವು ಏನು ನೇಮಕ ಮಾಡಿಕೊಂಡಿದ್ದೀರಿ ಅದರಿಂದ ಅರ್ಧದಷ್ಟು ಕೋಣೆಗಳು ಭರ್ತಿಯಾಗುತ್ತವೆ, ಅರ್ಧದಷ್ಟು ವರ್ಗಗಳು ಭರ್ತಿಯಾಗುತ್ತವೆ, ಇನ್ನರ್ಧ ಹಾಗೆಯೇ ಖಾಲಿ ಉಳಿಯುತ್ತದೆ. ಇದನ್ನು ಯಾವ ರೀತಿ ಬಗೆಹರಿಸಲು ಆಲೋಚಿಸಿದ್ದೀರಿ?

ನನಗೆ ದೊರೆತಿರುವ ಮಾಹಿತಿಯ ಪ್ರಕಾರ, ಎಂಟನೆ ಪಂಚವಾರ್ಷಿಕ ಯೋಜನೆಯು ಮುಗಿಯುವ ಕಾಲಕ್ಕಾದರೂ ನಮ್ಮ ಗ್ರಾಮಾಂತರ ಶಾಲೆಗಳಲ್ಲಿ ಎಷ್ಟು ವರ್ಗಗಳಿವೆ ಅಷ್ಟು ನೇಮಕಮಾಡಲು ಸಾಧ್ಯವಾಗಬಹುದು ಎನ್ನುವುದು ನಿಮ್ಮ ಇಲಾಖೆಯ ಅಧಿಕಾರಿಗಳ ಅಭಿಪ್ರಾಯ. ಈ ಅಭಿಪ್ರಾಯವನ್ನು ಆಧಾರವಾಗಿಟ್ಟುಕೊಂಡು ತಾವು ಏನಾದರೂ ನೇಮಕಾತಿಯನ್ನು ಹೆಚ್ಚು ಮಾಡುತ್ತೀರಾ? ಈ ವರ್ಷವೇ ಎಲ್ಲಾ ವರ್ಗಗಳಿಗೆ ಶಿಕ್ಷಕರನ್ನು ತುಂಬುತ್ತೀರಾ?

12.05 ಪಿ.ಎಂ

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಈಗ ವಿಶೇಷವಾದಂತಹ ಕಷ್ಟ ಪಲಗೆ ಯೋಜನೆ ಅಡಿಯಲ್ಲಿ ಸುಮಾರು 9326 ಏಕೋಪಾಧ್ಯಯ ಶಾಲೆಗಳಿಗೆ

ಮತ್ತೊಂದು ಶಿಕ್ಷಕರ ಹುದ್ದೆಯನ್ನು ನಾವು ಕಲ್ಪಿಸಿದ್ದೇವೆ. ಇದು 4ನೇ ಹಂತದಲ್ಲಿ 4597 ಏಕೋಪಾಧ್ಯಯ ಶಾಲೆಗಳಿಗೆ ಮತ್ತೊಬ್ಬ ಶಿಕ್ಷಕರನ್ನು ನೇಮಿಸುವ ಪ್ರಸ್ತಾಪನೆ ಆಗಿದೆ. ಇವರನ್ನು ಜೂನ್‌ನಿಂದ ಒದಗಿಸುತ್ತಿದ್ದೇವೆ. ನಮ್ಮ ಸರ್ಕಾರಕ್ಕೆ ಬಂದಂತಹ ಮಾಹಿತಿ ಪ್ರಕಾರ ನಮ್ಮ ಅನುಪಾತ ಎಷ್ಟು ಎಂದರೆ 50 ಮಕ್ಕಳಿಗೆ ಒಬ್ಬ ಉಪಾಧ್ಯಾಯರು. ಇದು ಸಾಮಾನ್ಯವಾಗಿರತಕ್ಕಂಥಾದ್ದು. ಅದರ ಪ್ರಕಾರ ಇಡೀ ರಾಜ್ಯದಲ್ಲಿ 12 ಸಾವಿರ ಹೆಚ್ಚುವರಿ ಶಿಕ್ಷಕರ ಅವಶ್ಯಕತೆ ಇದೆ. ತಾವು ಹೇಳತಕ್ಕಂಥದ್ದು ಗ್ರಾಮಾಂತರ ಪ್ರದೇಶಗಳ ಪ್ರಶ್ನೆ. ಗ್ರಾಮಾಂತರ ಪ್ರದೇಶಗಳಲ್ಲಿ 20 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರನ್ನು ನೇಮಿಸುವಂತೆ ಅನುಪಾತದ ಸಡಿಲಿಕೆ ಮಾಡಿದ್ದೇವೆ. ಇದಕ್ಕೆ ಸರ್ಕಾರ ಬದ್ಧವಾಗಿದೆ. ಅದು ಎಷ್ಟರಮಟ್ಟಿಗೆ ಹೋಗುತ್ತದೆ ಎಂದರೆ 300 ಜನಸಂಖ್ಯೆಯುಳ್ಳ ಹಳ್ಳಿಗೆ ಒಂದು ಶಾಲೆ, 1 ಕಿ.ಮಿ. ಅಂತರದಲ್ಲಿ ಒಂದು ಶಾಲೆ. ಇದು ನಮ್ಮ ಸರ್ಕಾರದ ನೀತಿ. ಸರ್ಕಾರ ಇದಕ್ಕೆ ಕೂಡ ಬದ್ಧವಾಗಿದೆ. ಈ ಅನುಪಾತದ ಮೇರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಕರನ್ನು ಒದಗಿಸತಕ್ಕ ಕಾರ್ಯಕ್ರಮಕ್ಕೆ ಸರ್ಕಾರ ಬದ್ಧವಾಗಿದೆ. ಅದಕ್ಕಾಗಿ ನಾನು ಹೇಳಿದೆ. 20 ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕರನ್ನು ಒದಗಿಸುತ್ತೇವೆ, ಅಂದರೆ ಒಂದು ವರ್ಗಕ್ಕೆ ಒಬ್ಬ ಅಧ್ಯಾಪಕ ಎಂದು ಆ ದಾಮಾಷಾ ಪ್ರಕಾರ ಹೇಳಿದೆ. ನಮ್ಮ ಗಣಿತದಲ್ಲಿ ವ್ಯತ್ಯಾಸವೇನೂ ಇಲ್ಲ. ನಮ್ಮಲ್ಲಿ ಇರತಕ್ಕ ನೀತಿ ಮತ್ತು ಅನುಪಾತಕ್ಕೆ ಹೊಂದಾಣಿಕೆಯಾಗುತ್ತದೆ. ಆ ಪ್ರಕಾರ ಶಿಕ್ಷಕರನ್ನು ಒದಗಿಸುವ ದಿಸೆಯಲ್ಲಿ ಕಾರ್ಯೋನ್ಮುಖರಾಗಿದ್ದೇವೆ.

ಉಪಾಧ್ಯಕ್ಷರು : ಶ್ರೀ ಡಿ.ಕೆ. ಶಿವಕುಮಾರ್‌ರವರ ಪ್ರಶ್ನೆಗೆ ಸಮಯ ಕೇಳಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ನಾನು ಈ ಪ್ರಶ್ನೆ ಹಾಕಿ ಆರು ತಿಂಗಳಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ : ನನಗಿನ್ನೂ ಮಾಹಿತಿ ಬಂದಿಲ್ಲ.

ಸಿದ್ದಾಪುರದಲ್ಲಿ ಜಿಲ್ಲಾ ಪರಿಷತ್ತಿನ ಪ್ರೌಢ ಶಾಲೆ

1121 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಸಿದ್ದಾಪುರ ಜಿ.ಪ. ಪ್ರೌಢಶಾಲೆಗೆ ಮಂಜೂರಾದ ಶಿಕ್ಷಕರ ಸಂಖ್ಯೆ ಎಷ್ಟು (ಹುದ್ದೇವಾರು ವಿವರ)?

ಆ) ಈಗ ಕೊರತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು (ಹುದ್ದೇವಾರು ವಿವರ ನೀಡುವುದು)

ಇ) ಈ ಕೊರತೆಯನ್ನು ಯಾವಾಗ ತುಂಬಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) 8 ಶಿಕ್ಷಕರ ಹುದ್ದೆಗಳು.

1) ಮುಖ್ಯೋಪಾಧ್ಯಾಯರು	-1
2) ಸಹ ಶಿಕ್ಷಕರು	-5
3) ವೃತ್ತಿ ಶಿಕ್ಷಕರು	-1
4) ದೈಹಿಕ ಶಿಕ್ಷಕರು	-1
ಒಟ್ಟು	**-8**

ಆ) ಕೊರತೆ ಇಲ್ಲ.

ಇ) ಉದ್ಭವಿಸುವುದಿಲ್ಲ.